**2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

**ಸಿ.ಮಿಸ್.379/2017**

**ಪಿ.ಡಬ್ಲ್ಯೂ.1–**

**ಪ್ರಮಾಣೀಕರಿಸಿದ ದಿನಾಂಕ:17.10.2023**

**ಪಾಟೀ ಸವಾಲು : ಎದುರುದಾರ ಪರ ವಕೀಲರಿಂದ : –**

ನಾನು ಬಿ.ಎ ಪದವಿಯನ್ನು ಓದಿರುತ್ತೇನೆ. ನಾನು ಕೆಲಸವನ್ನು ಮಾಡುತ್ತಿಲ್ಲ. ನನಗೆ ಈ ಹಿಂದೆ ಅಪಘಾತವಾಗಿದ್ದು, ತುಂಬಾ ಸಮಯ ಕುಳಿತುಕೊಳ್ಳಲಾಗದ ಕಾರಣ, ಕೆಲಸ ಮಾಡಲು ಆಗುವುದಿಲ್ಲ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ನನಗೆ ರಸ್ತೆ ಅಪಘಾತದಲ್ಲಿ ಮೊಣಕಾಲು ತೆರೆದುಕೊಂಡಿದ್ದು, ಕಾಲಿನ ಬೆರಳು ಸಂಪೂರ್ಣ ಕತ್ತರಿಸಿ ಹೋಗಿತ್ತು. ಸಾಕ್ಷಿ ಅವರು ಹಾಜರುಪಡಿಸಿದ ದಾಖಲೆಗಳನ್ನು ತೋರಿಸಲಾಗಿ ಸದರಿ ಚಿಕಿತ್ಸೆಗೆ ಸಂಬಂಧಿಸಿದ ದಾಖಲೆಗಳು ಇರುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ಕೆಲಸ ಮಾಡುವ ಶಕ್ತಿ ಇದ್ದು, ಎದುರುದಾರರಿಂದ ಹಣ ಪಡೆಯುವ ಉದ್ದೇಶದಿಂದ ಈ ಮೇಲೆ ಹೇಳಿದ ಕಾರಣ ನೀಡಿ ಕೆಲಸ ಮಾಡಲು ಆಗುವುದಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹಾಗೂ ಎದುರುದಾರರ ನಡುವೆ ವಿಚ್ಛೇದನ ಆಗಿರುತ್ತದೆ ಎಂದರೆ ಸರಿ. ಸದರಿ ವಿಚ್ಛೇದನ ಆದೇಶದ ವಿರುದ್ದ ನಾನು ಮೇಲ್ಮನವಿ ಸಲ್ಲಿಸಿರುವುದಿಲ್ಲ. ಸದರಿ ವಿಚ್ಛೇದನದ ಪ್ರಕರಣದಲ್ಲಿ ಎದುರುದಾರರು ನನ್ನನ್ನು ತಮ್ಮ ಜೊತೆ ಬಂದು ಜೀವನ ನಡೆಸಲು ಕೇಳಿದ್ದರೂ ಕೂಡ ನಾನು ವಿಚ್ಛೇದನವನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ.

ನಾನು ಸದರಿ ವಿಚ್ಛೇದನದ ಪ್ರಕರಣದ ಸಾಕ್ಷ್ಯದಲ್ಲಿ ಎದುರುದಾರರ ಜೊತೆ ವಾಸವಿರಲು ತಯಾರು ಇರುವುದಿಲ್ಲ ಎಂದು ನುಡಿದಿರುತ್ತೇನೆ ಎಂದರೆ ಸರಿ. ಅದೇ ರೀತಿ ಮದುವೆ ಖರ್ಚನ್ನು ನೀಡಿದರೆ, ನಾನು ವಿಚ್ಛೇದನ ಪಡೆಯುತ್ತೇನೆ ಎಂದು ನುಡಿದಿರುತ್ತೇನೆ ಎಂದರೆ ಸರಿ. ನಾನು ಎದುರುದಾರರ ಜೊತೆ ಕೇವಲ ೧೫ ದಿನಗಳು ಮಾತ್ರ ಜೀವನ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರಿನಲ್ಲಿ ಎಷ್ಟು ಜಮೀನು ಇರುತ್ತದೆ ನನಗೆ ಗೊತ್ತಿಲ್ಲ. ಅದು ಇನಾಮತ್ತು ಜಮೀನು ಆಗಿರುತ್ತದೆ. ನನ್ನ ತಂದೆಗೆ ಸುಮಾರು ೧೦ ರಿಂದ ೧೫ ಎಕರೆ ಜಮೀನು ಎಂದರೆ ಸರಿಯಲ್ಲ. ನನ್ನ ತಂದೆಯ ಸ್ವಂತ ಮನೆ ಇರುತ್ತದೆ. ಸದರಿ ಮನೆಯನ್ನು ನನ್ನ ಬಾವ ಕಟ್ಟಿಸಿಕೊಟ್ಟಿರುತ್ತಾರೆ. ನನ್ನ ತಂದೆ ಮನೆಯನ್ನು ಬಾಡಿಗೆಗೆ ನೀಡಿರುವುದಿಲ್ಲ. ನನ್ನ ತಂದೆಗೆ ತಿಂಗಳಿಗೆ ಸುಮಾರು ೫೦ ಸಾವಿರ ರೂಪಾಯಿ ಬಾಡಿಗೆ ವರಮಾನ ಇರುತ್ತದೆ ಎಂದರೆ ಸರಿಯಲ್ಲ. ನಾನು ಬಿ.ಎ ಪದವಿ ಹೊರತುಪಡಿಸಿ ಬೇರೆ ವಿದ್ಯಾಭ್ಯಾಸ ಮಾಡಿರುವುದಿಲ್ಲ. ನಾನು ಫೋಟೋಗ್ರಾಫಿ ಕೋರ್ಸ್ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಎದುರುದಾರರ ಜೊತೆ ವಾಸವಿದ್ದಾಗ ನನ್ನನ್ನು ಚೆನ್ನಾಗಿ ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಮದುವೆ ಆದಾಗಿ ನಿಂದಲೂ ಎದುರುದಾರರ ಜೊತೆ ಗಲಾಟೆ ಮಾಡಿಕೊಂಡು ನನ್ನ ತಾಯಿ ಮನೆಯಲ್ಲಿ ಇರುತ್ತಿದ್ದೆ ಎಂದರೆ ಸರಿಯಲ್ಲ. ನಾನು ೧ ವರ್ಷಗಳ ಕಾಲ ಎದುರುದಾರರ ಜೊತೆ ವಾಸವಿದ್ದೆ. ನನ್ನ ಮದುವೆಯ ವೆಚ್ಚವನ್ನು ಎದುರುದಾರ ಹಾಗೂ ಅವರ ತಂದೆ ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಎದುರುದಾರರಿಗೆ ಅವರ ತಂದೆ ತಾಯಿ ಹಾಗೂ ಸಹೋದರ ಸಹೋದರಿಯರು ಇರುತ್ತಾರೆ ಎಂದರೆ ಸರಿ. ಅವರ ಸಹೋದರಿಗೆ ಮದುವೆ ಆಗಿತ್ತು ಎಂದರೆ ಸರಿ. ಸದರಿಯವರ ಮದುವೆ ನನ್ನ ಮದುವೆಯ ಎಷ್ಟು ದಿನಗಳ ಮೊದಲು ಆಗಿತ್ತು ನನಗೆ ಗೊತ್ತಿಲ್ಲ. ಎದುರುದಾರರ ತಂದೆಗೆ ಕಾಯಿಲೆ ಇರುತ್ತದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಮದುವೆ ಸಮಯದಲ್ಲಿ ನೀಡಿರುವ ಹಣ ಹಾಗೂ ಆಭರಣಗಳ ವಿಷಯ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ.

ಅದೇ ರೀತಿ ಮದುವೆಯಾಗಿ ೧ ವರ್ಷಗಳ ಕಾಲ ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ಎಂಬ ವಿಷಯವು ಸತ್ಯವಾಗಿದ್ದು, ನಾನು ಎದುರುದಾರರಿಗೆ ಹಣ ನೀಡಿದ ನಂತರ ಚೆನ್ನಾಗಿ ನೋಡಿಕೊಂಡಿರುತ್ತಾರೆ. ಎದುರುದಾರಿಗೆ ನೀಡಿರುವ ೫ ಲಕ್ಷ ರೂಪಾಯಿಗಳಿಗೆ ಸಂಬಂಧಿಸಿದಂತೆ ಬ್ಯಾಂಕ್ ಖಾತೆ ವಿವರವನ್ನು ನೀಡಿರುತ್ತೇನೆ. ಸದರಿ ಹಣವನ್ನು ನನ್ನ ತಂದೆ ಹಾಗೂ ಬಾವ ಇಂದಿರಾನಗರದ ಬ್ಯಾಂಕಿನಿಂದ ಹಣ ಪಡೆದು ನೀಡಿರುತ್ತಾರೆ. ನನ್ನ ಬಾವನ ಹೆಸರು ಕೋದಂಡರಾಮ. ನನ್ನ ಬಾವ ಹಾಗೂ ಎದುರುದಾರರು ಸೇರಿ ವ್ಯವಹಾರ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ನಿ.ಪಿ.೫ ಮತ್ತು ೬ ಗಳ ಕುರಿತಾದ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ. ಇವತ್ತಿನವರೆಗೂ ನನ್ನ ಬಾವನಿಗೆ ಸದರಿ ಹಣವನ್ನು ಯಾವ ಕಾರಣಕ್ಕಾಗಿ ವರ್ಗಾಯಿಸಿರುತ್ತಾರೆ ಎಂದು ಕೇಳಿರುವುದಿಲ್ಲ. ನನ್ನ ಬಾವ ಹಾಗೂ ಎದುರುದಾರರ ನಡುವೆ ಸಂಬಂಧ ಚೆನ್ನಾಗಿ ಇತ್ತು.

ಎದುರುದಾರರು ಎಲೆಕ್ಟ್ರಾನಿಕ್ ಸಿಟಿಯಲ್ಲಿ ೪ ನಿವೇಶನಗಳನ್ನು ಖರೀದಿಸಿದ ಬಗ್ಗೆ ನನಗೆ ಗೊತ್ತಿಲ್ಲ, ಆದರೆ ನಿವೇಶನಗಳು ಇರುತ್ತವೆ. ಈ ಮೇಲೆ ಹೇಳಿದ ೫ ಲಕ್ಷ ರೂಪಾಯಿಗಳು ನನ್ನ ತಂದೆ ಎದುರುದಾರರಿಗೆ ವರದಕ್ಷಿಣೆಯಾಗಿ ನೀಡಿರುತ್ತಾರೆ. ಮುಂದುವರೆದು ಸಾಕ್ಷಿಯು ಈ ಮೇಲೆ ಹೇಳಿದ ೫ ಲಕ್ಷ ರೂಪಾಯಿಗಳಲ್ಲಿ ೨,೭೫,೦೦೦/- ಗಳನ್ನು ಬ್ಯಾಂಕಿನಲ್ಲಿ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ೫ ಲಕ್ಷ ರೂಪಾಯಿಗಳು ವರದಕ್ಷಿಣೆ ಆಗಿರುವುದಿಲ್ಲ, ಎಂದರೆ ಸರಿಯಲ್ಲ. ಸದರಿ ಹಣ ನನ್ನ ಬಾವ ಎದುರುದಾರರಿಂದ ನಿವೇಶನ ಖರೀದಿಸಿ, ವರ್ಗಾಯಿಸಿದ್ದ ಹಣ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಹಣವನ್ನು ಯಾವ ದಿನ ವರ್ಗಾಯಿಸಿರುತ್ತಾರೆ ನನಗೆ ನೆನಪಿಲ್ಲ. ಎದುರುದಾರರು ಯಾವುದೇ ವರದಕ್ಷಿಣೆ ಕೇಳಿರುವುದಿಲ್ಲ, ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ಧೇನೆ ಎಂದರೆ ಸರಿಯಲ್ಲ.

ಎದುರುದಾರರ ವಿರುದ್ದ ವರದಕ್ಷಿಣೆ ಪ್ರಕರಣ ದಾಖಲಾಗಿ, ಅದು ವಜಾ ಆಗಿರುತ್ತದೆ ಎಂದರೆ ಸಾಕ್ಷಿಯು ರಾಜಿ ಆಗಿರುತ್ತದೆ ಎಂದು ನುಡಿಯುತ್ತಾರೆ. ನಿ.ಪಿ.೧೦ ರ ಪ್ರಕಾರ ಎದುರುದಾರರ ತಪ್ಪಿಲ್ಲ ಎಂದು ಪ್ರಕರಣ ವಜಾ ಆಗಿರುತ್ತದೆ ಎಂದರೆ ಸಾಕ್ಷಿ ಅದು ರಾಜಿಯಾಗಿ ವಜಾ ಆಗಿರುತ್ತದೆ ಎಂದು ನುಡಿಯುತ್ತಾರೆ. ನಾನು ನನ್ನ ಅಕ್ಕ ಬಾವನ ಮಾತನ್ನು ಹೆಚ್ಚಾಗಿ ಕೇಳುತ್ತೇನೆ ಎಂದರೆ ಸರಿಯಲ್ಲ. ನಾನು ಎದುರುದಾರರ ವಿರುದ್ದ ನಂದಗುಡಿ ಪೋಲೀಸ್ ಠಾಣೆಯಲ್ಲಿ ದೂರು ನೀಡಿದ್ದೆ ಎಂದರೆ ಸರಿ. ಆದರೆ ಪೋಲಿಸರು ನಮ್ಮಿಬ್ಬರನ್ನು ಕರೆದು ವಿಚಾಯಿರಿಸಿರುವುದಿಲ್ಲ. ಪೊಲೀಸರು ನಾನು ನೀಡಿರುವ ದೂರಿನಲ್ಲಿ ಯಾವುದೇ ಹುರುಳು ಇರುವುದಿಲ್ಲ ಎಂದು ಹಿಂಬರಹ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.೧೩ ಕೇವಲ ಎದುರುದಾರರನ್ನು ಕರೆಯಿಸಿ ನಂತರ ನೀಡಿದ ಹಿಂಬರಹವಾಗಿರುತ್ತದೆ.

**<u>ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.</u>**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.**